ಕಥೆ

# ಉರ್ಮಿಯ ಪರ್ಯಟನೆ



**ವಿನ್ಯಾಸ ಹೆಗಡೆ**

ಕಲೆ: ಮುರಳೀಧರ್ ರಾಥೋಡ್

ಉರ್ಮಿ ಮಲೆನಾಡಿಗೆ ಬಂದಾಗ ಅಡಿಕೆ ಸುಗ್ಗಿ ಪ್ರಾರಂಭವಾಗಿ ತಿಂಗಳಾಗಿತ್ತು. ಅಲ್ಲಿನ ಅನೇಕರ ಮನೆಬಾಗಿಲ ಕಿರು ಅಂಗಳ ಮತ್ತು ಅಡಿಕೆ ಅಟ್ಟಗಳಲ್ಲಿ ಬಿಸಿಲಿಗೆ ಕೆಂಪಡಿಕೆ ಒಣಗಿ ಚೀಲ ಸೇರುತ್ತಿತ್ತು. ಮನೆ ಹಿಂದಣ ಬೇಣದ ಸಮತಟ್ಟು ಮತ್ತು ಗುಡ್ಡದ ಇಳಿಜಾರುಗಳಲ್ಲಿ ಗೋಟುಗೊನೆಗಳು ಚಾಲಿಯ ಹದಕ್ಕೆ ತಿರುಗುತ್ತಿದ್ದವು. ಉರ್ಮಿ ಬಂದ ಊರು ನಗರ ನಾಗರಿಕತೆಯಿಂದ ದೂರವಿತ್ತು. ಪಶ್ಚಿಮ ಘಟ್ಟದ ಬೆಟ್ಟವೊಂದರ ಇಳಿಜಾರಿನಲ್ಲಿ ನೆಲೆಗೊಂಡಿದ್ದ ಊರಿನ ಎರಡೂ ತುದಿಗಳಲ್ಲಿ ರಸ್ತೆ ಏರಿತ್ತು ಮತ್ತು ಸಣ್ಣ ಊರಿನ ಎಲ್ಲಾ ಕ್ಷುದ್ರತೆಯನ್ನು ತನ್ನ ಹೆಗಲಮೇಲೆ ಹೊತ್ತುಕೊಂಡಿತ್ತು. ಅಲ್ಲಿನ ಕೆಲ ಗಂಡಸರು ಪ್ರತಿನಿತ್ಯ ಮುಂಜಾನೆ ಎಲೆಯಡಿಕೆ ಕವಳ ಬಾಯಿಗೆ ಜಡಿದು, ಅಂಗಳದಂಚಲ್ಲಿ ನಿಂತು ಮೊಬೈಲ್ ಕೈಯನ್ನು ಆಕಾಶಕ್ಕೆತ್ತಿ, ನೆಟ್ವರ್ಕ್ ಹುಡುಕುತ್ತಾ ವಾರದ ಅಡಿಕೆಧಾರಣೆ, ಬರುತ್ತೇನೆಂದು ಹೇಳಿ ಕೈಕೊಟ್ಟ ಕೊನೆಗೌಡ, ಉದುರಡಿಕೆ ಆರಿಸಲು ಕಡಿಮೆಯಾದ ಹೆಣ್ಣಾಳುಗಳು ಮುಂತಾಗಿ ತರಹೇವಾರಿ ತಲೆಬಿಸಿಯಲ್ಲಿ ಮುಳುಗಿದ್ದ ಚಿತ್ರಗಳು ಸಾಮಾನ್ಯವಾಗಿತ್ತು. ಚರಿತ್ರೆಯ ಪುಸ್ತಕದಲ್ಲಿ ಸಿಲುಕಿಕೊಂಡ ಅಧ್ಯಾಯವೊಂದು ವರ್ತಮಾನದ ಯಾವುದೋ ಗ್ರಂಥಾಲಯದಲ್ಲಿ ಭವ್ಯ ಭವಿಷ್ಯಕ್ಕೆ ಹಂಬಲಿಸುತ್ತಾ ಪೇಚಾಡುತ್ತಿರುವಂತೆ ಆ ಊರು ಕಾಣುತ್ತಿತ್ತು.

ಮೂವತ್ತು ಮನೆಗಳ ಮೇಲಿನ ಕೇರಿ, ಆ ಕೇರಿಯ ಪಕ್ಕದಲ್ಲಿ ಒಂದು ಸರಕಾರಿ ಪ್ರಾಥಮಿಕ ಶಾಲೆ ಮತ್ತು ನಾಲ್ಕು ಫರ್ಲಾಂಗ್ ಕೆಳಗೆ ನಡೆದರೆ, ಅಲ್ಲೊಂದು ಹೂಳು ತುಂಬಿದ ಕೆರೆಯಿತ್ತು. ಆ ಹಾಳು ಕೆರೆಯ ಪಕ್ಕದಲ್ಲೇ ಒಂದಕ್ಕೊಂದು ಅಂಟಿಕೊಂಡಂತೆ ಹತ್ತು ಮನೆಗಳ ಕೆಳಗಿನ ಕೇರಿ ಮತ್ತು ಕೆಳಗಿನ ಕೇರಿಯ ಮನೆಗಳ ಮುಂದೆ ದಾರಿಗೇ ಅಂಟಿಕೊಂಡ ಅಡಿಕೆ ತೋಟಗಳು. ಹೀಗೆ ಹಂತ ಹಂತಗಳಲ್ಲಿ ಊರು ಹಬ್ಬಿತ್ತು. ಕೆಳಗಿನ ಕೇರಿಯ ಮನೆಗಳ ಮುಂದೆ ತುಳಸಿ ಗಿಡಗಳು ಮತ್ತು ಮೇಲಿನ ಕೇರಿಯ ಮನೆಗಳ ಮುಂದೆ ಬಗೆಬಗೆಯ ಹೂಗಿಡ, ಬಳ್ಳಿಗಳು ಹಸಿರಾಗಿ ನಳನಳಿಸುತ್ತಿದ್ದವು. ಕಾಡುಕೋಣಗಳು ಊರುಕೋಣಗಳಂತೆ ಮನೆಪಕ್ಕದಲ್ಲಿಯೇ ಮೇಯುವ ದೃಶ್ಯ ಅಲ್ಲಿ ಸಾಧಾರಣವಾಗಿತ್ತು. ಊರಿನ ಎರಡೂ ಕೇರಿಗಳ ನಡುವೆಯಿದ್ದ ಒಂಟಿ ಮನೆಗೆ